ಜೀವನವೇ ಧರ್ಮವಾಯಿತು; **ಶಾಸ್ತ್ರ, ಗುರು** ಮತ್ತು **ಮಾತೃಭೂಮಿ** – ಈ ಮೂರೂ ಅವರಲ್ಲಿ ಮಿಳಿತಗೊಂಡವು; ಜಗತ್ತಿನ ಹಲವು ಮತಪಂಥಗಳಿಗೆ ಸೇರಿದ ಸಂತರ, ಮಹಾತ್ಮರ ಸಂದೇಶಗಳು ಸ್ವಾಮಿ ವಿವೇಕಾನಂದರಲ್ಲಿ ಒಂದು ಪರಿಪುಷ್ಟ ಮಾಧ್ಯಮವನ್ನು ಕಂಡುಕೊಂಡವು. ಹೀಗೆ ತಮ್ಮ ಗುರುದೇವರಾದ ಶ್ರೀರಾಮಕೃಷ್ಣರಂತೆ, ಸ್ವಾಮೀಜಿಯೂ ತಮ್ಮದೇ ಆದ ವಿಶಿಷ್ಟ ಹಾಗೂ ಚೇತೋಹಾರಿಯಾದ ಬಗೆಯಲ್ಲಿ 'ಸಾಮರಸ್ಯ ಚಕ್ರವರ್ತಿ'ಯಾದರು.

### ದೇಶಭಕ್ತಿಯ ಜ್ವಾಲೆ

ಸ್ವಾಮಿ ವಿವೇಕಾನಂದರ ಕೃತಿಗಳಲ್ಲಿ ಕಾಣಬರುವ ಮತ್ತೊಂದು ವಿಶಿಷ್ಟ ಸಂಗತಿಯೆಂದರೆ ಅವರ ಅಪ್ರತಿಮ ದೇಶಭಕ್ತಿ. ಭಾರತ ಅವರಿಗೆ ಕೇವಲ ಒಂದು ಭೂಭಾಗವಾಗಿ ಕಾಣಲಿಲ್ಲ; ಆಧ್ಯಾತ್ಮಿಕತೆಯ ಆಗರವಾಗಿ, ಸಭ್ಯತೆ ಮತ್ತು ಸಂಸ್ಕೃತಿಗಳ ಸಾಗರವಾಗಿ ಕಂಡಿತು. ಹಾಗೆಂದೇ ಈ ನಾಡಿನ ಪ್ರತಿಕಣವೂ ಅವರಿಗೆ ಪವಿತ್ರವೆನಿಸಿತು. ಭಾರತ ಈ ಜಗತ್ತಿಗೆ ನೀಡಬೇಕಾದ ಮಹತ್ತಮ ಕೊಡುಗೆಯೆಂದರೆ ಅದರ ಆಧ್ಯಾತ್ಮಿಕತೆ. ಹೀಗಾಗಿ ಭಾರತದ ಅಸ್ತಿತ್ವದಲ್ಲಿ, ಉದ್ಧಾರದಲ್ಲಿ ಇಡೀ ಜಗತ್ತಿನ ಕಲ್ಯಾಣವೂ ಅಡಗಿದೆ. ಇಡೀ ಪ್ರಪಂಚದ ಹಿತಕ್ಕಾಗಿ ಭಾರತ ಸಶಕ್ತಗೊಳ್ಳಬೇಕು ಎನ್ನುವುದು ಸ್ವಾಮೀಜಿಯವರ ಅಭಿಪ್ರಾಯವಾಗಿತ್ತು. ಭಾರತದ ಆತ್ಮ ಧರ್ಮದಲ್ಲಿದೆ. ಅದೇ ಈ ನಾಡಿನ ಸಾರ್ವತ್ರಿಕ ಧ್ಯೇಯ. ಇದನ್ನು ಯಾವ ಕಾರಣಕ್ಕೂ ಮಾರ್ಪಡಿಸಲಾಗದು. ಧರ್ಮದ ಸಂರಕ್ಷಣೆಯಲ್ಲಿಯೇ ಭಾರತದ ಉಳಿವು ನಿಂತಿದೆ ಎಂದು ಅವರು ಹೇಳುತ್ತಾರೆ.

ಭಾರತದ ಉದ್ಧಾರ ಜನಸಮಾನ್ಯರ ಏಳಿಗೆಯನ್ನು ಅವಲಂಬಿಸಿದೆ. ಶಿಕ್ಷಣವೊಂದೇ ಭಾರತದ ಸಮಸ್ಯೆಗಳಿಗೆ ಏಕಮಾತ್ರ ಪರಿಹಾರ. ಲಕ್ಷಾಂತರ ದೇಶಬಾಂಧವರು ಪ್ರಾಣಿಗಳಿಗಿಂತ ಹೀನಾಯವಾದ ಬಾಳನ್ನು ನಡೆಸುತ್ತಿದ್ದಾರೆ. ಅವರನ್ನು ಹೊರಗಿಟ್ಟು ಭಾರತವು ಯಾವ ಪ್ರಗತಿಯನ್ನೂ ಸಾಧಿಸದು. 'ಸೇವೆ' ಮತ್ತು 'ತ್ಯಾಗ'ಗಳೆಂಬ ಅವಳಿ ಆದರ್ಶಗಳನ್ನು ನಮ್ಮ ಯುವಜನರು ಪಾಲಿಸಬೇಕು. ಭಾರತಮಾತೆಯ ಮಕ್ಕಳ ಸೇವೆಯೇ ಭಾರತಮಾತೆಗೆ ಸಲ್ಲಿಸಬಹುದಾದ ಶ್ರೇಷ್ಠ ಪೂಜೆ. ಈ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಯಾವಾಗ ಉದಾರಹೃದಯಿಗಳಾದ ನೂರಾರು ಪುರುಷರು ಮತ್ತು ಸ್ತ್ರೀಯರು, ಜೀವನದ ವೈಭೋಗಗಳನ್ನು ಅನುಭವಿಸುವ ತಮ್ಮ ಆಸೆಯನ್ನು ತ್ಯಾಗ ಮಾಡುತ್ತಾರೋ, ದಾರಿದ್ರ್ಯ ಮತ್ತು ಅಜ್ಞಾನಗಳ ಸುಳಿಯಲ್ಲಿ ಸಿಲುಕಿ, ನಿಧಾನವಾಗಿ ಕೆಳಕ್ಕೆ ಮುಳುಗಿ ಹೋಗುತ್ತಿರುವ ತಮ್ಮ ಲಕ್ಷಾಂತರ ದೇಶಬಾಂಧವರ ಬಗ್ಗೆ ವ್ಯಾಕುಲಚಿತ್ತರಾಗಿ, ಅವರಿಗಾಗಿ ತಮ್ಮ ಕೈಲಾದಷ್ಟು ದುಡಿಯುತ್ತಾರೆಯೋ, ಆಗ ಮಾತ್ರವೇ ಭಾರತವು ಮೇಲೇಳುವುದು."

ಭಾರತದ ಪುನರುತ್ಥಾನದ ಬಗ್ಗೆ ಸ್ವಾಮೀಜಿ ಖಚಿತ ಅಭಿಪ್ರಾಯಗಳನ್ನು ಹೊಂದಿದ್ದರು. ಅವನ್ನು ತಮ್ಮ ಪ್ರವಚನಗಳಲ್ಲಿ ಮತ್ತು ಪತ್ರಗಳಲ್ಲಿ ಉಜ್ವಲ ಭಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಭಾರತದ ಭವಿಷ್ಯದ ಬಗ್ಗೆ ಅವರದು ಅತ್ಯಂತ ಆಶಾದಾಯಕ ನಿಲುವು. ಹಿಂದಿನ ವೈಭವವು ಮುಂದೆ ಬರಲಿರುವ ಸಂಪದ್ಭರಿತ ದಿನಗಳಿಗೆ ಹೋಲಿಸಿದರೆ ಕಳಪೆಯಾಗಿರುವುದು ಎಂದು ಅವರು ಹೇಳುತ್ತಾರೆ. ಇದು ನಿಜಕ್ಕೂ ಪ್ರಚಂಡ ಸಕಾರಾತ್ಮಕ ಭಾವನೆಯೇ ಸರಿ.

### ಶ್ರದ್ಧಾಂಜಲಿ

ಆಧುನಿಕ ಯುಗ ಕಂಡ ಮಹಾನ್ ಚೇತನಗಳಲ್ಲಿ ಅತ್ಯಂತ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವರು ಸ್ವಾಮಿ ವಿವೇಕಾನಂದರು. ಆಧ್ಯಾತ್ಮಿಕ ಜ್ಯೋತಿಃಪುಂಜವಾಗಿ ಬೆಳಗಿ, ಅದರ ಬೆಳಕಿನಿಂದಲೇ ಸಮಷ್ಟಿ ಹಾಗೂ ವ್ಯಷ್ಟಿ ಜೀವನಗಳ ಎಲ್ಲ ಪ್ರಕಾರಗಳಲ್ಲಿಯೂ ಹೊಸ ಚೇತನವನ್ನು ಮೂಡಿಸಿದ ಗರಿಮೆ ಅವರದು. ಅವರ ಜೀವನವೇ ಅವರ ಸಂದೇಶ; ಅವರ ಸಂದೇಶವೇ ಅವರ ಜೀವನ. ಹೀಗಾಗಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳ ವಿಸ್ತೃತ ಅಧ್ಯಯನ, ಚಿಂತನೆ ಮತ್ತು ಅನುಷ್ಠಾನವೇ ನಾವು ಅವರ ೧೫೦ನೇ ಜಯಂತಿಯ ಈ ಶುಭಸಂದರ್ಭದಲ್ಲಿ ಸಲ್ಲಿಸಬಹುದಾದ ಅತ್ಯಂತ ಸೂಕ್ತವಾದ ಶ್ರದ್ಧಾಂಜಲಿ. ಅದಕ್ಕೆ ಪೂರಕವಾಗಿ 'ವಿವೇಕಾನಂದರ ಕೃತಿಶ್ರೇಣಿ'ಯ ಪರಿಚಯಾತ್ಮಕ ಅಧ್ಯಯನವನ್ನು ತನ್ನ ಸಂಪಾದಕೀಯದ ಪುಟಗಳಲ್ಲಿ 'ವಿವೇಕಪ್ರಭ'ವು ಆರಂಭಿಸಲಿದೆ. ಮುಂದಿನ ಹಲವು ಸಂಚಿಕೆಗಳಲ್ಲಿ ಮೂಡಿಬರುವ ಈ ಸರಣಿಯು ಸ್ವಾಮೀಜಿಯವರ ಚಿಂತನಗಂಗೆಯ ಮುಖ್ಯಾಂಶಗಳನ್ನು ಓದುಗರಿಗೆ ಪರಿಚಯಿಸುವ ಉದ್ದೇಶ ಹೊಂದಿದೆ; ಆ ಮೂಲಕ ವಿವೇಕಾನಂದರ ಸಾಹಿತ್ಯಪ್ರಪಂಚವನ್ನು ಪ್ರವೇಶಮಾಡಲು ಎಲ್ಲರನ್ನೂ ಪ್ರೇರೇಪಿಸುವ ಆಶಯವನ್ನು ಇಟ್ಟುಕೊಂಡಿದೆ. ಸ್ವಾಮಿ ವಿವೇಕಾನಂದರಿಗೆ ಸಮರ್ಪಿತವಾಗಿರುವ ಈ ಕಾರ್ಯಕ್ಕೆ ಅವರು ಆಶೀರ್ವದಿಸಲಿ ಎಂದು ಅವರನ್ನು ಸವಿನಯವಾಗಿ ಪ್ರಾರ್ಥಿಸುತ್ತೇವೆ.

(ಮುಂದಿನ ಸಂಚಿಕೆಯಲ್ಲಿ : **ಚಿಕಾಗೋದಲ್ಲಿ ಚಮತ್ಕಾರ**)

**ಬೆಟ್ಟಗಳಷ್ಟು ಎತ್ತರದಂತೆ ಕಷ್ಟಗಳು ಕಾಣಬಹುದು. ಎಲ್ಲ ಸಂಗತಿಗಳೂ ಭಯಂಕರವಾಗಿರುವಂತೆ, ಕಳೆಗುಂದಿರುವಂತೆ ಅನ್ನಿಸಬಹುದು. ಆದರೆ ಅವೆಲ್ಲವೂ ಮಾಯೆ. ಅದಕ್ಕೆ ಭಯಪಡದಿರು. ಆಗ ಅವು ತೊಲಗಿಹೋಗುವವು. ಅವುಗಳ ಮೇಲೆ ಮೆಟ್ಟಿನಿಲ್ಲು. ಅವು ಸತ್ತುಹೋಗುವುವು. ಹೆದರದಿರು. ಎಷ್ಟು ಸಲ ನೀನು ವಿಫಲಗೊಂಡಿರುವೆಯೆಂದು ಚಿಂತಿಸದಿರು. ಅದಕ್ಕಾಗಿ ಮರುಗದಿರು. ಕಾಲವೆಂಬುದು ಅನಂತವಾಗಿದೆ. ಮುಂದೆ ಸಾಗು. ಮತ್ತೆ ಮತ್ತೆ ನಿನ್ನನ್ನು ದೃಢಪಡಿಸಿಕೋ. ಬೆಳಕು ಬಂದೇ ಬರಬೇಕು.**

**– ಸ್ವಾಮಿ ವಿವೇಕಾನಂದ**

'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎನ್ನುವುದು ಸ್ವಾಮಿ ವಿವೇಕಾನಂದರು ಆಧುನಿಕ ಜನಾಂಗಕ್ಕೆ, ಅದರಲ್ಲೂ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಿಗೆ ನೀಡಿರುವ ತಾರಕಮಂತ್ರ. ಇದನ್ನು ಆಧ್ಯಾತ್ಮಿಕ ನೆಲೆಯಲ್ಲಿ ಮಾತ್ರವಲ್ಲದೆ, ಜೀವನದ ಎಲ್ಲ ಸ್ತರಗಳಲ್ಲೂ ಅಳವಡಿಸಿ ಕೊಳ್ಳಬಹುದೆಂದು ಬೋಧಿಸುವ ಅಪೂರ್ವ ಜಿಜ್ಞಾಸೆಯನ್ನು ನಾವು ಈ ಲೇಖನದಲ್ಲಿ ಕಾಣಬಹುದು. ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಪ್ರಖ್ಯಾತ ವಿದ್ವಾಂಸರು ಮತ್ತು ಚಿಂತಕರಾದ ಇವರು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರು ಅತ್ಯುತ್ತಮ ವಾಗ್ಮಿಗಳು ಕೂಡ ಹೌದು.

# ಆತ್ಮಮೋಕ್ಷ ಮತ್ತು ಜಗದ್ಧಿತ – ಒಂದು ನೂತನ ವಿವರಣೆ

**ಸ್ವಾಮಿ ಹರ್ಷಾನಂದ**

## ಸೂತ್ರಗಳ ಮಹತ್ವ

ಭಾರತದೇಶವು ಜ್ಞಾನಕ್ಕೆ ಪಾರಂಪರಿಕವಾಗಿ ಪೂಜ್ಯ ಹಾಗೂ ಗೌರವಾರ್ಹ ಸ್ಥಾನವನ್ನು ನೀಡಿದೆ. **ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ** (ಭಗವದ್ಗೀತಾ, ೪:೩೮) – "ಜ್ಞಾನಕ್ಕಿಂತ ಪವಿತ್ರವಾದ ವಸ್ತು ಬೇರೊಂದಿಲ್ಲ." ಭಾರತೀಯ ಸಭ್ಯತೆಯು ಜ್ಞಾನವನ್ನು ಅತ್ಯಂತ ಪವಿತ್ರ ವಸ್ತುವನ್ನಾಗಿ ಪರಿಗಣಿಸಿರುವುದು ಮಾತ್ರವಲ್ಲದೆ, ಅದನ್ನು ದೈವೀಕರಿಸಿ ಉನ್ನತವಾದ ದೇವತೆಯ ಸ್ಥಾನವನ್ನೂ ನೀಡಿದೆ. ಜ್ಞಾನವನ್ನು ಸೂಚಿಸುವ ಪದವಾಗಿರುವ 'ವಿದ್ಯಾ' ಎನ್ನುವುದು ದುರ್ಗಾಮಾತೆಯ ಹೆಸರುಗಳಲ್ಲಿ ಒಂದಾಗಿದೆ. ಮಾತೆ ಸರಸ್ವತಿಯು ವಿದ್ಯಾಧಿದೇವತೆ ಮಾತ್ರವಲ್ಲ, ಜ್ಞಾನವೇ ಮೂರ್ತಿವೆತ್ತವಳು. "ಜ್ಞಾನವೆನ್ನುವುದು ಒಬ್ಬ ವ್ಯಕ್ತಿಯು ಧರಿಸಬಹುದಾದ ಅತ್ಯುತ್ತಮ ಆಭರಣ; ಜ್ಞಾನ ವಿಲ್ಲದವನು ಪಶುವಿಗೆ ಸಮಾನ" ಎಂದು ಭರ್ತೃಹರಿಯು ತನ್ನ "ನೀತಿಶತಕ"ದಲ್ಲಿ ಹೇಳಿದ್ದಾನೆ (ಶ್ಲೋಕ ೧೬, ೧೭). ಲೌಕಿಕವಿದ್ಯೆ (ಅಪರಾವಿದ್ಯೆ) ಮತ್ತು ಶಾಸ್ತ್ರವಿದ್ಯೆಗಳನ್ನು (ಪರಾವಿದ್ಯೆ) ಕಲಿಯ ಬೇಕಾದದ್ದು ಎಲ್ಲ ವ್ಯಕ್ತಿಗಳ ಮುಖ್ಯ ಕರ್ತವ್ಯ. ಲೌಕಿಕವಿದ್ಯೆಯು ಐಹಿಕ ಜೀವನವನ್ನು ಸಾಕಷ್ಟು ಉಪಯುಕ್ತವಾಗಿ ನಡೆಸಲು ಅನುಕೂಲ ಮಾಡಿಕೊಟ್ಟರೆ, ಶಾಸ್ತ್ರವಿದ್ಯೆಯು ಐಹಿಕ ಜೀವನದ ಅನಂತರದ ಜೀವನವನ್ನು ಚೆನ್ನಾಗಿ ಬಾಳುವುದಕ್ಕೆ ಸಹಾಯ ಮಾಡುತ್ತದೆ. **ತಪಸ್ಸು** (ದೇಹಸಂಯಮ, ವಾಕ್‌ನಿಗ್ರಹ ಹಾಗೂ ಮನೋನಿಗ್ರಹಗಳನ್ನು ಆಚರಿಸುವುದು), **ಆಚಾರ್ಯ ಅಥವಾ ಬೋಧಕನಿಗೆ ಶ್ರದ್ಧಾಪೂರ್ಣ, ನಿಷ್ಠಾವಂತ ಸೇವೆಯನ್ನು ಸಲ್ಲಿಸುವುದು** – ಇವು ಪರಾವಿದ್ಯೆಯನ್ನು ಕಲಿಯಲು ಸಾಧನ ಗಳಾಗಿವೆ. ವಿದ್ಯೆ ಮತ್ತು ಸನ್ನಡತೆಗಳ ಭಂಡಾರವೇ ಆಗಿದ್ದ ಈ ಆಚಾರ್ಯರುಗಳು ತಾವೇ ಸ್ವತಃ ಜ್ಞಾನಪಿಪಾಸುಗಳಾಗಿ ದ್ದರಲ್ಲದೆ, ಗಳಿಸಿದ ಜ್ಞಾನವನ್ನು ತಮ್ಮಲ್ಲಿದ್ದ ಯೋಗ್ಯ ಶಿಷ್ಯರು ಗಳಿಗೆ ಬೋಧಿಸಲು ಕೂಡ ಉತ್ಸುಕರಾಗಿದ್ದರು.

ಬೋಧಿಸುವ ತಂತ್ರವು ಅರಿಯಲು ಬೇಕಾದ ಕಲಿಕೆಯ ವಿಧಾನದಷ್ಟೇ ಕೌಶಲ್ಯದಿಂದ ಕೂಡಿದುದು ಮಾತ್ರವಲ್ಲ, ಅದಕ್ಕಿಂತಲೂ ಕೊಂಚ ಮಿಗಿಲಾದುದೇ ಎಂದು ಹೇಳಬಹುದು. ಆಚಾರ್ಯನು ಶಿಷ್ಯರುಗಳೊಡಗೂಡಿ ಜೀವನ ಸಾಗಿಸುವುದು, ಬಾಯಿಪಾಠದ ಮೂಲಕವೇ ಜ್ಞಾನಪ್ರಸಾರಣೆಯಾಗಬೇಕು ಎಂಬ ನಿಯಮ – ಇವುಗಳು ಹಿಂದಿನ ಕಾಲದಲ್ಲಿ ಇದ್ದಾಗ, ಶಿಷ್ಯರುಗಳ ಸ್ಮರಣಶಕ್ತಿಯ ಮೇಲೆ ಅದರಿಂದ ಹೆಚ್ಚು ಒತ್ತಡ ಬೀಳುತ್ತಿತ್ತು. ಇದನ್ನು ಮನಗಂಡ ಶ್ರೇಷ್ಠ ಆಚಾರ್ಯರುಗಳು ಸರಿಸಾಟಿಯಿಲ್ಲದ ಒಂದು ಹೊಸ ಪದ್ಧತಿಯನ್ನು ರೂಪಿಸಿದರು. ಅದೇ 'ಸೂತ್ರ'ಗಳ ಮೂಲಕ ಶಿಕ್ಷಣ. ಈ ಸೂತ್ರಗಳು ಸಣ್ಣ ವಾಗಿದ್ದು ನೆನಪಿನಲ್ಲಿಡಲು ಸುಲಭವಾಗಿದ್ದವು; ಅದಲ್ಲದೆ ಅವು ಗಳಲ್ಲಿ ಜ್ಞಾನವೇ ತುಂಬಿ ತುಳುಕುತ್ತಿತ್ತು. ಈ ಪದ್ಧತಿಯು ಪರಂಪ ರಾಗತವಾಗಿ ರೂಢಿಯಲ್ಲಿ ಬಂದು, ಮುಂದಿನ ಪೀಳಿಗೆಗೆ ಅಪಾರ ಜ್ಞಾನಸಂಪತ್ತನ್ನು ಸಂಗ್ರಹಿಸಲು ಸಹಾಯ ಮಾಡಿತು; ಇದಲ್ಲದೆ, ಸೂತ್ರಗಳ ಅರ್ಥವಿವರಣೆಯೂ ಸೇರಿ ಒಂದು ಹೊಸ ಸಾಹಿತ್ಯರೂಪವನ್ನೇ ಕಾಲಾನುಕ್ರಮದಲ್ಲಿ ತಂದುಕೊಟ್ಟಿತು.

ಸೂತ್ರವು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಸುಲಭ. ಅಷ್ಟೇ ಅಲ್ಲದೆ, ಕಾಲಕ್ರಮೇಣ ಅದರಿಂದಾಗಿ ಹೊಸ ಪ್ರಯೋಜನಗಳೂ ಹೊರಹೊಮ್ಮಿದವು. ಒಂದು ವಿಷಯವನ್ನು ಅನೇಕ ದೃಷ್ಟಿಕೋನ ಗಳಿಂದ ವಿವರಿಸಲು ಸೂತ್ರಗಳು ಅವಕಾಶ ಮಾಡಿಕೊಟ್ಟವು. ಇದರಿಂದಾಗಿ ಅನೇಕ ಚಿಂತನಾಪಥಗಳು ಮೂಡಿಬರುವ ಸಾಧ್ಯತೆಗೆ ಅನುವಾಯಿತು. ಹಾಗಿದ್ದರೂ ಆ ಚಿಂತನಾಪಥಗಳಲ್ಲಿ ನಮಗೆ ಬೇಕಾದುದನ್ನು ಆರಿಸಿಕೊಳ್ಳಲು ಪೂರ್ಣಸ್ವಾತಂತ್ರ್ಯವು ದೊರಕುತ್ತದೆ. ಏಕೆಂದರೆ ವೈವಿಧ್ಯವೇ ಸೂತ್ರಗಳ ಜೀವಾಳ.

## ವಿವೇಕಾನಂದರ ಸೂತ್ರ

ತಮ್ಮ ಜೀವನದ ಕೊನೆಗಾಲದಲ್ಲಿ ತಾವು ನಡೆಸಿದ ಹೋರಾಟ, ಎಸಗಿದ ಕಾರ್ಯಗಳ ಹಿಂದಿನ ಸಮಗ್ರ ತತ್ತ್ವವನ್ನು ಸ್ವಾಮಿ ವಿವೇಕಾನಂದರು ಒಂದು ಸೂತ್ರರೂಪದಲ್ಲಿ ಕೊಟ್ಟರು. **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** – 'ತನ್ನ ಮೋಕ್ಷಕ್ಕಾಗಿ ಮತ್ತು ಜಗತ್ತಿನ ಹಿತಕ್ಕಾಗಿ' ಎಂಬುದೇ ಆ ಸೂತ್ರ. ಈ ಸೂತ್ರ ವನ್ನು ರಾಮಕೃಷ್ಣಸಂಘದ ಧ್ಯೇಯವಾಕ್ಯವನ್ನಾಗಿ ಸ್ವಾಮೀಜಿ ನೀಡಿದ್ದಾರೆ. ಇದು ಮುಖ್ಯವಾಗಿ ರಾಮಕೃಷ್ಣ ಭಾವಧಾರೆಯ ಪ್ರಸರಣಕ್ಕೆ ಅನ್ವಯವಾಗುವ ವಾಕ್ಯ. ಹೀಗಿದ್ದರೂ, ಎಲ್ಲ ರೀತಿಯ ಅಭಿವೃದ್ಧಿಯ ಪ್ರಕ್ರಿಯೆಗೆ ಮಾರ್ಗದರ್ಶಕ ತತ್ತ್ವವಾಕ್ಯವನ್ನಾಗಿ ಸ್ವೀಕರಿಸಬಹುದಾದ ಅಂತಸ್ಸತ್ವ ಮತ್ತು ಸಾಮರ್ಥ್ಯವನ್ನು ಅದು ಹೊಂದಿದೆ. ಇನ್ನೂ ಹೇಳುವುದಾದರೆ, ಸಮಕಾಲೀನ ಭಾರತಕ್ಕೆ ಅದು ಅತ್ಯಂತ ಸಮಯೋಚಿತವಾಗಿದೆ. ಆದ್ದರಿಂದ ಈ ಸೂತ್ರದ ಶ್ರದ್ಧಾಪೂರ್ವಕ ಅಧ್ಯಯನ ಮತ್ತು ವಿಶ್ಲೇಷಣೆ ನಮಗೆಲ್ಲರಿಗೂ ಪ್ರಯೋಜನಕಾರಿ.

## ಸೂತ್ರದ ಅರ್ಥಸಂಪತ್ತು

ಸೂತ್ರದ ಅರ್ಥವನ್ನು ಬಿಡಿಸಿಹೇಳುವ ಹಾಗೂ ವಿಶ್ಲೇಷಿಸುವ ಮೊದಲು, ನಾವು ಅದರಲ್ಲಿರುವ ಪದಗಳ ನಿಜವಾದ ಅರ್ಥವನ್ನು ಗ್ರಹಿಸಬೇಕು. 'ಆತ್ಮನ್' ಎಂಬ ಪದವನ್ನೇ ತೆಗೆದುಕೊಳ್ಳಿ. ಅದರ ಹಿಂದಿರುವ ಅರ್ಥವಾದ ಸರ್ವಜೀವಿಗಳ ಅಂತರಾಳದಲ್ಲಿ ಸ್ಥಿತನಾಗಿರುವ ಪರಮಾತ್ಮ ಎಂಬುದನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಲು ಆಗುವುದಿಲ್ಲ. ಈ ವಾಕ್ಯದಲ್ಲಿ 'ಆತ್ಮ' ಎಂದರೆ, ದೇಹ–ಮನೋಬುದ್ಧಿಗಳ ಸಂಘಾತದೊಡನೆ ತಾದಾತ್ಮ್ಯ ಹೊಂದಿ ಬಂಧಿತನಾಗಿರುವ 'ಜೀವಾತ್ಮ'ನೆಂದು ತಿಳಿಯಬೇಕು. ಇಲ್ಲದಿದ್ದರೆ 'ಮೋಕ್ಷ' ಅಥವಾ ಬಿಡುಗಡೆಯ ಕಲ್ಪನೆಯೇ ನಿರಾಧಾರವಾಗುತ್ತದೆ. ಏಕೆಂದರೆ ಪರಮಾತ್ಮನು ಸರ್ವತಂತ್ರಸ್ವತಂತ್ರನು. ಅವನ ವಿಷಯದಲ್ಲಿ ಬಿಡುಗಡೆಯ ಪ್ರಶ್ನೆಯೇ ಬರುವುದಿಲ್ಲ. ಇನ್ನು 'ಜಗದ್–ಹಿತ' ಎಂಬಲ್ಲಿ 'ಜಗತ್' ಶಬ್ದವು ಸರ್ವಜೀವಿಗಳಿಗೂ ಸರಿಹೊಂದುವುದಾದರೂ, ವಿಶೇಷವಾಗಿ ಮಾನವಕುಲಕ್ಕೆ ಮಾತ್ರ ಇಲ್ಲಿ ಅನ್ವಯವಾಗುತ್ತದೆ. ಆದರೆ 'ಜಗತ್' ಶಬ್ದದ ವ್ಯಾಪ್ತಿಯಲ್ಲಿ ಪ್ರಕೃತಿಯೂ ಬರುತ್ತದೆ. ಅದನ್ನು ಹೊರಗಿಡುವ ಪ್ರಶ್ನೆಯೇ ಇಲ್ಲ. 'ಹಿತ' ಎಂದರೆ ಯಾವುದು ಅಧಿಕಾಧಿಕ ಜನರಿಗೆ ಅಧಿಕಾಧಿಕ ಸುಖ–ಸಂತೋಷಗಳನ್ನು ತರುವುದೋ, ಶಾಂತಿ–ನೆಮ್ಮದಿ ನೀಡುವುದೋ ಅದೇ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಸೂತ್ರದ ನಿಜಾರ್ಥವನ್ನು ಅರಿಯಬಹುದು. ಅದು ಹೀಗಿದೆ: **"ಪ್ರತಿಯೊಬ್ಬನೂ ತನ್ನ ಬಿಡುಗಡೆಗಾಗಿ ಕರ್ಮವನ್ನು ಮಾಡಬೇಕು; ಜೊತೆಗೆ ಈ ಜಗತ್ತಿನ ಇನ್ನಿತರ ಜೀವಿಗಳಿಗೂ ಒಳಿತನ್ನು ಮಾಡುವ ಕ್ರಿಯೆಯಲ್ಲಿ ತೊಡಗಬೇಕು."** ಇದೇ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ವಾಕ್ಯದ ಅಂತರಾರ್ಥ.

## ಸಾಂಪ್ರದಾಯಿಕ ವಿಶ್ಲೇಷಣೆ

ಸೂತ್ರದಲ್ಲಿರುವ 'ಮೋಕ್ಷ' ಎಂಬುದರ ಸಾಮಾನ್ಯ ಅರ್ಥ, 'ಅಧ್ಯಾತ್ಮದ ಮೂಲಕ ಬಿಡುಗಡೆ ಪಡೆಯುವುದು' ಎಂದು. ಅಂದರೆ 'ಮುಕ್ತಿ' ಪಡೆಯುವುದು, ಕೈವಲ್ಯವನ್ನು ಹೊಂದುವುದು ಅಥವಾ ಪುನರ್ಜನ್ಮದಿಂದ ಬಿಡುಗಡೆಯಾಗುವುದು. ಮುಕ್ತಿಯನ್ನು ಯಾವುದೇ ರೀತಿಯ ಆಧ್ಯಾತ್ಮಿಕ ಸಾಧನೆಯಿಂದ ಪಡೆಯಬಹುದು. ಇದನ್ನೇ 'ಯೋಗ'ವೆಂದು ಸಾಂಪ್ರದಾಯಿಕರು ಕರೆದಿದ್ದಾರೆ. 'ಜಗದ್–ಹಿತ' ಎಂದರೆ ಎಲ್ಲ ರೀತಿಯ ಸೇವಾಕಾರ್ಯಗಳಲ್ಲಿಯೂ ನಿರತನಾಗಿರುವುದು ಎಂದರ್ಥ. ಈ ಬಗೆಯ ವಿಶ್ಲೇಷಣೆಯಲ್ಲಿ ಯಾವ ತಪ್ಪೂ ಇಲ್ಲ. ಹಾಗೆ ನೋಡಿದರೆ ಇದೇ ಅಂತಿಮವಾದ ನೈಜ ವಿಶ್ಲೇಷಣೆ.

ಆದರೆ ಮೇಲಿನ ವ್ಯಾಖ್ಯೆಯನ್ನು ಸೀಮಿತ ಪರಿಧಿಯುಳ್ಳ ಅಧ್ಯಾತ್ಮಜೀವನಭಾಗಕ್ಕೆ ಮಾತ್ರ ಮಿತಿಗೊಳಿಸಬೇಕೆ? ಅದರ ವ್ಯಾಪ್ತಿಯನ್ನು ಲೌಕಿಕ ಜೀವನದ ಇತರ ಭಾಗಗಳಿಗೂ ವಿಸ್ತರಿಸಬಹುದಲ್ಲವೆ? ಇದರ ಬಗ್ಗೆ ಸೋದರಿ ನಿವೇದಿತಾ ಹೇಳುವುದನ್ನು ಕೇಳಿ:

"ಅನೇಕ ಮತ್ತು ಏಕ – ಎರಡೂ ಒಂದೇ ಸತ್ಯವಾದರೆ, ಎಲ್ಲ ರೀತಿಯ ಪೂಜೆ ಮಾತ್ರವಲ್ಲದೆ, ಎಲ್ಲ ಕೆಲಸವೂ, ಎಲ್ಲ ಬಗೆಯ ಹೋರಾಟವೂ, ಎಲ್ಲ ವಿಧದ ಸೃಷ್ಟಿಯೂ ಸಾಕ್ಷಾತ್ಕಾರದ ಮಾರ್ಗಗಳೇ ಆಗುತ್ತವೆ. ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ; ಆತ್ಮವಿಜಯವೇ ತ್ಯಾಗ; ಜೀವನವೇ ಧರ್ಮ; ವಸ್ತುಗಳನ್ನು ಹಿಡಿದಿಟ್ಟುಕೊಳ್ಳುವುದು ಬಿಟ್ಟು ಬಿಡುವಷ್ಟೇ ವಿಶ್ವಸನೀಯ. ಈ ಬಗೆಯ ಸಾಕ್ಷಾತ್ಕಾರದಿಂದಾಗಿಯೇ ವಿವೇಕಾನಂದರು ಕರ್ಮದ ಶ್ರೇಷ್ಠ ಬೋಧಕರಾಗಿದ್ದಾರೆ. ಅವರು ಬೋಧಿಸುವ ಕರ್ಮವು ಜ್ಞಾನ ಮತ್ತು ಭಕ್ತಿಗಳಿಂದ ಬೇರೆಯಾದುದಲ್ಲ. ಅವರ ಪಾಲಿಗೆ ಕಾರ್ಖಾನೆ, ಪಾಠಶಾಲೆ, ಹೊಲ – ಇವುಗಳು ಸಂನ್ಯಾಸಿಯ ಕುಟೀರ ಮತ್ತು ದೇವಸ್ಥಾನಗಳಷ್ಟೇ ಭಗವಂತನನ್ನು ಸಂಧಿಸುವುದಕ್ಕೆ ಸತ್ಯವಾದ ಮತ್ತು ಯೋಗ್ಯವಾದ ಸ್ಥಳಗಳು. ಅವರ ದೃಷ್ಟಿಯಲ್ಲಿ ಮಾನವ ಸೇವೆ ಮತ್ತು ಭಗವತ್‌ಪೂಜೆಗೂ, ಪುರುಷಾಕಾರ ಮತ್ತು ನಂಬಿಕೆಗೂ, ನೈತಿಕತೆ ಮತ್ತು ಆಧ್ಯಾತ್ಮಿಕತೆಗೂ ಯಾವ ವ್ಯತ್ಯಾಸವೂ ಇಲ್ಲ" (**ವಿವೇಕಾನಂದರ ಕೃತಿಶ್ರೇಣಿ,** ಸಂಪುಟ ೧, ಪು. XIX, XX). ನಮ್ಮ ಮೇಲ್ಕಂಡ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಸ್ಪಷ್ಟವಾಗಿ ದೊರಕಿದೆಯಲ್ಲವೇ?

## ಮೋಕ್ಷಭಾವನೆಯ ಪುನರ್‌ಪರಿಶೀಲನೆ

ಒಮ್ಮೆ ನಾವು ಮೇಲ್ಕಂಡ ಉತ್ತರಕ್ಕೆ ಸಮ್ಮತಿ ಸೂಚಿಸಿದೆವೆಂದರೆ, ನಾವು ಈಗಾಗಲೇ ಇಟ್ಟುಕೊಂಡಿರುವ ಮೋಕ್ಷಭಾವನೆಯ ಪುನರ್‌ಪರಿಶೀಲನೆ ಅವಶ್ಯವಾದೀತು. ಇದರಿಂದ ಹೊರಹೊಮ್ಮುವ ನಿರ್ಣಯಗಳು ಪೂರ್ಣವಾಗಿ ಅದ್ಭುತವಾದುವು. 'ಮೋಕ್ಷ' ಪದದ ನಿಷ್ಪತ್ತಿ ನೋಡಿದರೆ ಅದು 'ಮುಚ್' ಎಂಬ ಮೂಲಧಾತುವಿನಿಂದ ಬಂದಿರುವುದು ಗೋಚರವಾಗುತ್ತದೆ. 'ಮುಚ್' ಎಂದರೆ ಬಿಡುಗಡೆ. ಯಾವುದರಿಂದ ಬಿಡುಗಡೆ? ಎಲ್ಲದರಿಂದಲೂ ಬಿಡುಗಡೆ; ಕಟ್ಟುಪಾಡುಗಳಿಂದ, ಸಂಕುಚಿತತೆಯಿಂದ, ಎಲ್ಲ ರೀತಿಯ ಮಿತಿಗಳಿಂದ, ನಿರ್ಬಂಧದಿಂದ – ಎಲ್ಲದರಿಂದಲೂ ಬಿಡುಗಡೆ. ನಮ್ಮ ಜೀವನದಲ್ಲಿ ವಿವಿಧ ಹಂತಗಳಲ್ಲಿ ಎಷ್ಟೋ ರೀತಿಯ ಕಟ್ಟುಪಾಡುಗಳು, ಮಿತಿಗಳು ನಮ್ಮನ್ನು ಕಟ್ಟಿಹಾಕುತ್ತವೆ; ಅವೆಲ್ಲದರಿಂದಲೂ ಮುಕ್ತಿ ಎನ್ನುವುದೇ 'ಮೋಕ್ಷ' ಪದದ ವ್ಯಾಪಕಾರ್ಥ.

**೧. ನಾವು ಬಿಡುಗಡೆ ಬಯಸುವ ಸಂಗತಿಗಳ ಪಟ್ಟಿಯಲ್ಲಿ ಹಸಿವು, ರೋಗಗಳು, ದೈಹಿಕ ನಿಶ್ಶಕ್ತಿಗಳು – ಇವು ಮೊದಲ ಸ್ಥಾನ ಪಡೆದಿವೆ.** ಇವುಗಳಿಂದ ನಮಗೆ ಬಿಡುಗಡೆ ಅಗತ್ಯ. ಶರೀರವು ಪ್ರಕೃತಿದತ್ತವಾದ ಉಪಕರಣ. ಶರೀರದ ಮೂಲಕವೇ ನಾವು ಜೀವನದಲ್ಲಿ ಏನಾದರೂ ಯಶಸ್ಸನ್ನು ಕಾಣಬೇಕಾಗಿರುವುದರಿಂದ, ಅದನ್ನು ಹಸಿವು, ರೋಗಗಳು ಮತ್ತು ದೈಹಿಕ ನಿಶ್ಶಕ್ತಿಗಳಿಂದ ಮುಕ್ತಗೊಳಿಸಬೇಕು. ಜೀವನದಲ್ಲಿ ನಾವು ಗಳಿಸಬೇಕಾದ ಮೊದಲ ಸ್ವಾತಂತ್ರ್ಯವಿದು. ಇದನ್ನು ನಾವು ಪುಷ್ಟಿಕರ ಆಹಾರ ಸೇವನೆ, ವೈದ್ಯಕೀಯ ತಪಾಸಣೆ ಮತ್ತು ಅಂಗಸಾಧನೆಗಳಿಂದ ಪಡೆಯಬಹುದು. ಇದು ಎಲ್ಲರಿಗೂ ತಿಳಿದ ವಿಚಾರ. ಸ್ವಾಮಿ ವಿವೇಕಾನಂದರು ದೈಹಿಕಶಕ್ತಿಗೆ ಅತಿ ಹೆಚ್ಚಿನ ಒತ್ತು ನೀಡಿರುವುದನ್ನು ನೋಡಿದರೆ ಈ ವಿವರಣೆ ಸ್ವಾಮೀಜಿಯ ತತ್ತ್ವಗಳಿಗೆ ಸಮ್ಮತವಾಗಿರುವುದು

ಕಾಣಬರುತ್ತದೆ. ಹಾಗೆಯೇ ಮೇಲೆ ಹೇಳಿರುವ ವಿಷಯ ಉಪನಿಷತ್ತಿನ ಚಿಂತನಾಧಾರೆಗೆ ಕೂಡ ಹೊಂದುವಂತಿದೆ (ನೋಡಿ: ಮುಂಡಕ ಉಪನಿಷತ್ ೩:೨:೪; ಛಾಂದೋಗ್ಯ ಉಪನಿಷತ್ ೭:೮:೧; ಕಠೋಪನಿಷತ್ ೩:೧:೩).

**೨. ನಮ್ಮ ಮುಂದಿನ ವಿಚಾರ ಬಡತನ ಮತ್ತು ಅದರಿಂದ ಉದ್ಭವವಾಗುವ ಸಮಸ್ಯೆಗಳು.** ಭರ್ತೃಹರಿಯು ತನ್ನ 'ನೀತಿಶತಕ'ದಲ್ಲಿ, ಈ ಜಗತ್ತಿನಲ್ಲಿ ಇರುವ ಎಲ್ಲ 'ಸದ್ಗುಣ'ಗಳೂ ಹಣವಂತನಿಗೆ ತಾನಾಗಿಯೇ ಬಂದು ಸೇರುತ್ತವೆ (ಶ್ಲೋಕ ೩೨, ೩೩) ಎಂದು ವಿಡಂಬನೆ ಮಾಡಿದ್ದಾನೆ; 'ಬಡತನವು ಒಂದು ಶಾಪ' ಎಂಬ ಸಿದ್ಧಾಂತಕ್ಕೆ ಇಂಬುಕೊಟ್ಟಿದ್ದಾನೆ. ಬಡತನವು ವ್ಯಕ್ತಿಯೊಬ್ಬನಲ್ಲಿ ಇರುವ ಎಲ್ಲ ರೀತಿಯ ಉತ್ಸಾಹ ಮತ್ತು ಸದ್ಗುಣಗಳನ್ನು ಅಪಹರಿಸುತ್ತದೆ. ಬಡವರ ಬಂಧುವಾಗಿದ್ದ ಸ್ವಾಮಿ ವಿವೇಕಾನಂದರು ದೀನದಲಿತರ ಆರ್ಥಿಕ ಏಳಿಗೆಗಾಗಿ ಗಂಭೀರ ಪ್ರಯತ್ನಗಳನ್ನು ನಡೆಸಿದರು. ಬಡವರಿಗೆ ಸಹಾಯಹಸ್ತ ನೀಡುವಂತೆ ಸಮಾಜದಲ್ಲಿ ಉನ್ನತಸ್ತರ ದಲ್ಲಿರುವ ಶ್ರೀಮಂತರಿಗೆ ಸೂಚಿಸಿದರು. ಅವರೆಲ್ಲರೂ ಸಮಾಜದ ಒಟ್ಟು ಸಂಪತ್ತಿಗೆ ವಿಶ್ವಸ್ತರಾಗಿರುವಂತೆ (trustees) ಸಲಹೆ ನೀಡಿ ದರು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಆರ್ಥಿಕ ಅಭಿವೃದ್ಧಿ, ಅದಕ್ಕಾಗಿ ಮೀಸಲಾದ ವೃತ್ತಿಪರ ಶಿಕ್ಷಣ, ಆರ್ಥಿಕ ಅಭ್ಯುದಯದ ಪರಿಣಾಮವಾಗಿ ಶ್ರಮಜೀವಿಗಳಿಂದ ಉತ್ಪನ್ನವಾಗುವ ಸಂಪತ್ತಿನ ಸಮಾನ ಹಂಚಿಕೆ – ಇವೇ ಮೊದಲಾದುವುಗಳು ಸ್ವಾಮಿ ವಿವೇಕಾ ನಂದರು ಬಡತನದ ನಿರ್ಮೂಲನಕ್ಕಾಗಿ ಸೂಚಿಸಿದ ಕೆಲವು ಮಾರ್ಗಗಳು. ಈ ಸಲಹೆಗಳು ಸಾಕಾರಗೊಂಡಾಗ ಮಾತ್ರ ನಾವು ನಿಜವಾದ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದುತ್ತೇವೆ.

**೩. ಸಾಮಾಜಿಕ ನ್ಯೂನತೆಯೆನ್ನುವುದು ಮೂರನೆಯ ಬಂಧನ.** ಇದರಿಂದಲೂ ಮುಕ್ತಿ ಪಡೆಯುವುದು ಅಗತ್ಯ. ಹಿಂದೆ ಜಾತಿಪದ್ಧತಿಯು ವ್ಯಕ್ತಿಯೊಬ್ಬ ಪ್ರಕೃತಿದತ್ತವಾಗಿ ಪಡೆದಿರುವ ಗುಣಗಳ ಮೇಲೆ ಅವಲಂಬಿತವಾಗಿತ್ತು. ಅದರ ಪಾಲನೆಯಿಂದ, ಕೆಲವು ನಿರ್ದಿಷ್ಟ ಕಸಬುಗಳಲ್ಲಿ ಜನಗಳಿಗೆ ತರಬೇತಿ ಕೊಡಲು ಪ್ರೋತ್ಸಾಹ ದೊರಕುತ್ತಿತ್ತು. ಹೀಗಾಗಿ ಅನಾರೋಗ್ಯಕರವಾದ ಪೈಪೋಟಿಗೆ ಅಲ್ಲಿ ಅವಕಾಶ ಇರಲಿಲ್ಲ. ಈ ಪದ್ಧತಿಯಲ್ಲಿ ಶ್ರಮಜೀವನವೆಂಬುದು ವ್ಯಕ್ತಿಯೊಬ್ಬನ ಸ್ವಭಾವದಲ್ಲಿ ಬಂದದ್ದು ಎಂದು ಒಪ್ಪಿಕೊಳ್ಳಲಾಗಿತ್ತು. ಮಾನವನ ಘನತೆಯ ಹಿರಿಮೆಯನ್ನು ಇದರಲ್ಲಿ ಎತ್ತಿಹಿಡಿಯಲಾಗಿತ್ತು. ಈ ಪದ್ಧತಿಯು ಅನೇಕ ಶತಮಾನಗಳವರೆಗೆ ಅದ್ಭುತವಾಗಿ ನಡೆದುಬಂದಿತು. ಆದರೆ ಕಾಲಾಂತರದಲ್ಲಿ, ಹುಟ್ಟಿದ ಕುಲ ಮಾತ್ರವೇ ಆಧಾರವಾಗಿ ಜಾತಿಗೆ ಮಾರ್ಗಸೂಚಿಯಾಯಿತು. ಸ್ವಾರ್ಥಿಗಳು ಕೆಲವು ಮುಖ್ಯ ಕಸಬುಗಳಲ್ಲಿ ಪಟ್ಟಭದ್ರ ಹಿತಾಸಕ್ತಿಯನ್ನು ಸೃಷ್ಟಿಸಿಕೊಂಡು, ಅದರಿಂದ ಬೇರೆಯವರನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವ ಮೂಲಕ, ದುರ್ಲಾಭವನ್ನು ಪಡೆಯಲು ಉದ್ಯುಕ್ತರಾದರು. ಆಗ ಸಮಾಜದಲ್ಲಿ ಬಿರುಕು ಕಾಣಿಸಿಕೊಂಡಿತು. ಈ ಕಂದಕ ಕ್ರಮೇಣ ದೊಡ್ಡದಾಗಿ, ಕೆಲವು ಗುಂಪುಗಳನ್ನು ಕೆಳಮಟ್ಟದವರೆಂದು ಪಟ್ಟಿ ಮಾಡಲಾಯಿತು. ನಮಗೆ ರಾಜಕೀಯ ಸ್ವಾತಂತ್ರ್ಯ ದೊರೆತ ಮೇಲೂ ಇದು ಹೀಗೆಯೇ ಮುಂದುವರಿದೇ ಇದೆ.

**೪. ಹಾಗೆಯೇ ಲಿಂಗಭೇದದಿಂದ ಉಂಟಾಗಿರುವ ನ್ಯೂನತೆಗಳು ಕೂಡ ಒಂದು ಬಂಧನವೇ ಆಗಿದೆ.** ಭಾರತವು ಸ್ತ್ರೀಯರಿಗೆ ಉನ್ನತವಾದ ಗೌರವಸ್ಥಾನ ನೀಡಿದೆ. ಆದರೆ ಆಚರಣೆಯಲ್ಲಿ ಮಾತ್ರ ಅದು ಕಾರ್ಯಗತವಾಗಿಲ್ಲ. ಪುರುಷವರ್ಗದವರು ಸ್ತ್ರೀಯರನ್ನು 'ಅಬಲೆ' ಎಂದು ಕರೆದು, ಕಳೆದ ಒಂದು ಸಾವಿರ ವರ್ಷಗಳಿಗೂ ಹೆಚ್ಚಿನ ಕಾಲ ಎಲ್ಲ ರೀತಿಯ ಶೋಷಣೆಗೆ ಅವರನ್ನು ಒಳಪಡಿಸಿದ್ದಾರೆ. ಜಾತಿ, ಲಿಂಗಭೇದ, ಬಡತನ, ಶಿಕ್ಷಣದ ಕೊರತೆ, ಸಾಂಸ್ಕೃತಿಕ ಹಿನ್ನಡೆ – ಈ ಎಲ್ಲವೂ ಸಾಮಾಜಿಕ ವಿಭಜನೆಗೆ ಕಾರಣಗಳಾಗಿವೆ. ಈ ರೀತಿಯ ಸಾಮಾಜಿಕ ಬಂಧನಗಳಿಂದ ಬಿಡುಗಡೆ ಪಡೆಯುವುದಕ್ಕೆ ಸ್ವಾಮಿ ವಿವೇಕಾನಂದರು ಸೂಚಿಸುವ ಪರಿಹಾರವೇನು? ಅದೇ ಶಿಕ್ಷಣ. ಯುಕ್ತರೀತಿಯ ಶಿಕ್ಷಣವು ಜೀವನದ ಬಗ್ಗೆ ಸರಿಯಾದ ದೃಷ್ಟಿಯನ್ನು ನೀಡುತ್ತದೆ. ಒಳ್ಳೆಯ ಶಿಕ್ಷಣವೇ ಈ ಎಲ್ಲ ತೊಡಕುಗಳಿಗೆ ರಾಮಬಾಣ. ಯಾವ ಶಿಕ್ಷಣವು ವ್ಯಕ್ತಿಯೊಬ್ಬನನ್ನು ಜ್ಞಾನವಂತನನ್ನಾಗಿ ಮಾಡಿ, ಆತನ ಘನತೆಯ ಭಾವನೆಯನ್ನು ಮರಳಿ ಅವನಿಗೆ ನೀಡುವುದೋ ಅದು ಅತ್ಯುತ್ತಮ ಪರಿಹಾರ! ಇಲ್ಲ, ಇಲ್ಲ, ಅದೊಂದೇ ಪರಿಹಾರ!

೫. ಶಿಕ್ಷಣದ ಬಗೆಗಿನ ಚರ್ಚೆಯ ವಿಷಯವು ಸಹಜವಾಗಿಯೇ ನಮ್ಮನ್ನು ಬೇರೊಂದು ಕಾರ್ಯಕ್ಷೇತ್ರಕ್ಕೆ ಕರೆದೊಯ್ಯುವುದು. ಅದೇ **ಬೌದ್ಧಿಕ ದಾಸ್ಯ.** ಅಜ್ಞಾನ, ಮೂಢನಂಬಿಕೆ ಮತ್ತು ಬೌದ್ಧಿಕ ದಬ್ಬಾಳಿಕೆ ಕೂಡ, ಬೌದ್ಧಿಕ ದಾಸ್ಯದ ಚೌಕಟ್ಟಿನಲ್ಲಿಯೇ ಬರುತ್ತವೆ. ಈ ದಾಸ್ಯದಿಂದಲೂ ನಾವು ಬಿಡುಗಡೆ ಪಡೆಯಬೇಕು. ಅಜ್ಞಾನ ಮತ್ತು ಮೂಢನಂಬಿಕೆಗಳು ಜನಗಳಿಗೆ ಹೇಳಲಾರದಷ್ಟು ಸಂಕಷ್ಟವನ್ನು (ಅವರವರ ಮಟ್ಟಿಗೆ) ಕೊಟ್ಟಿವೆ, ನಿಜ. ಆದರೆ ಅದಕ್ಕಿಂತಲೂ ಅಗಾಧವಾದ ಆಘಾತವನ್ನು ಸಮಾಜಕ್ಕೆ ನೀಡಿರುವ ಸಂಗತಿಗಳೆಂದರೆ, ಬೌದ್ಧಿಕ ಶೋಷಣೆ ಮತ್ತು ಬುದ್ಧಿಸಮ್ಮೋಹನ ಕ್ರಿಯೆಗಳು. ಈ ಭೀಕರ ಸಮಸ್ಯೆಗೆ ಇರುವುದೊಂದೇ ಪರಿಹಾರ. ಅದೇ ಶಿಕ್ಷಣ. ಯಾವ ಶಿಕ್ಷಣದಿಂದ ಜ್ಞಾನ ಲಭಿಸುವುದೋ, ಬುದ್ಧಿಯು ಚುರುಕುಗೊಳ್ಳುವುದೋ, ಸಂಸ್ಕೃತಿಯು ಮನಸ್ಸಿನಲ್ಲಿ ಮೂಡುವುದೋ, ಆ ಶಿಕ್ಷಣವೇ ಈ ಸಮಸ್ಯೆಗೆ ಮದ್ದು. ಈ ಬಗೆಯ ಶಿಕ್ಷಣದಿಂದ ಬುದ್ಧಿಯು ನಿರಂಕುಶವಾಗಿ ಯೋಚಿಸುವುದಲ್ಲದೆ, ಸರಿಯಾದ ಮಾರ್ಗ ದಲ್ಲಿ ಚಿಂತಿಸಲು ಪ್ರಾರಂಭ ಮಾಡುವುದು. ಅತ್ಯಧಿಕ ಜನರಿಗೆ ಅತ್ಯಧಿಕ ಲಾಭವಾಗಬೇಕೆನ್ನುವುದೇ ಯೋಗ್ಯಚಿಂತನೆಯ ಅಳತೆ ಗೋಲು. ಸ್ವಾಮೀಜಿಯವರು ಈ ರೀತಿಯ ಶಿಕ್ಷಣಕ್ಕೇ ಅತಿ ಹೆಚ್ಚು ಮಹತ್ತ್ವ ನೀಡಿದ್ದಾರೆ.

ಇಷ್ಟೆಲ್ಲಾ ರೀತಿಯ ಬಿಡುಗಡೆಗಳನ್ನು ಹೊಂದಿದರೂ ಸಮಾಜವು ಅನೈತಿಕ ಜೀವನಕ್ಕೆ, ಅನೈತಿಕ ಆಚರಣೆಗಳಿಗೆ ವಶವಾಗುವ ಸಾಧ್ಯತೆ ಇದ್ದೇ ಇದೆ. ನೈತಿಕ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಹಾಗೂ ಅದನ್ನು ಆಚರಣೆಗೆ ತರುವಾಗ ಅನೇಕ ಆಂತರಿಕ ಮತ್ತು ಬಾಹ್ಯ ನ್ಯೂನತೆಗಳು ಹಾಗೂ ಪರಿಮಿತಿಗಳು ಕಾಣಿಸಿಕೊಳ್ಳಬಹುದು. ಈ ಸ್ಥಿತಿಯನ್ನು ಹೀಗೇ ಮುಂದುವರಿಯಲು ಬಿಟ್ಟರೆ, ಅದು